ಮಾಡಲಮ್ಮ, ನಂಗೆ ಯಾವಾಗಲೂ ಹುಡುಗಿ ತರಾ ಅಲಂಕಾರ ಮಾಡಿಕೊಂಡು ಇರಬೇಕು ಅಂತ ತುಂಬಾ ಆಸೆಯಾಗುತ್ತೆ, ಆದರೆ ಎಲ್ಲರು ಏನು ಅಂದುಕೊಳ್ಳುತ್ತಾರೋ ಅಂತ ಬಲವಂತವಾಗಿ ತಡೆದುಕೊಳ್ಳುತ್ತಿದ್ದೀನಿ ಅಮ್ಮ' ಎಂದು ಹೇಳಿ ಗಳಗಳನೇ ಅತ್ತುಬಿಟ್ಟ.

'ಅಯ್ಯೊ ದೇವರೆ, ಅಂಗೆಲ್ಲ ಯಾಕೊ ಅನ್ನಿಸುತ್ತೆ, ನೀನು ಗಂಡು ಕಣೊ, ನಮ್ಮ ವಂಶದ ಏಕೈಕ ಗಂಡು ಕುಡಿ ನೀನು, ನಮ್ಮ ವಂಶನ ಬೆಳಗಬೇಕಾದವನು ನೀನು. ಹಾಗೆಲ್ಲ ಮಾಡಬಾರದಪ್ಪ, ಅದು ತಪ್ಪು, ನೀನು ಬದಲಾಗಬೇಕು, ಆ ಥರಾ ಆಸೆ ಬರಲೇಬಾರದು, ಜನ ನಿನ್ನ ಅಸಹ್ಯವಾಗಿ ನೋಡ್ತಾರೆ, ನೆಂಟರಿಷ್ಟರೆಲ್ಲ ಆಡಿಕೊಂಡು ನಗ್ತಾರೆ, ಇರೋ ಒಬ್ಬ ಗಂಡು ಮಗ ಹೀಗಾದ ಅಂತ ನಿಮ್ಮ ಅಪ್ಪ ದೊಡ್ಡಪ್ಪ ಎದೆ ಒಡ್ಕೊಂಡು ಪ್ರಾಣ ಬಿಟ್ಟುಬಿಡುತ್ತಾರೆ, ನಿನ್ನ ಅಕ್ಕಂದಿರಿಗೆ ಮದುವೆ ಮಾಡಬೇಕು, ನೀನು ಹೀಗಾದರೆ ಅವರನ್ನ ಯಾರು ಮದ್ವೆ ಆಗ್ತಾರೆ ಹೇಳೊ ವೀರೂ, ನಾನಾದ್ರೂ ಬದುಕಿರುತ್ತೀನಾ? ವಾರಿಜ ಜೋರಾಗಿ ಅತ್ತಾಗ ವೀರೂ ಕೂಡಾ ಜೋರಾಗಿ ಅತ್ತ.

'ಥೂ, ಮತ್ತೆ ಹುಡುಗಿ ತರಾ ಅಳ್ತಿಯಲ್ಲೊ, ನೀನು ಅಳಬಾರದು, ಗಂಡಸು ನೀನು, ನೋಡು ವೀರೂ ನಿನ್ನ ಕೈಮುಗಿದು ಬೇಡಿಕೊಳ್ತೀನಿ, ಈ ಹುಚ್ಚು ಆಸೆಗಳನ್ನೆಲ್ಲ ಬಿಟ್ಟುಬಿಡಪ್ಪ, ನನಗಾಗಿ ಹುಡುಗನ ತರಾ ಇರೋ, ನಿನ್ನ ಮದುವೆ ಮಾಡಿ ಸೊಸೆ ತಂದು ಮೊಮ್ಮಕ್ಕಳ ಜೊತೆ ಇನ್ನೂ ಹತ್ತಾರು ವರ್ಷ ಬಾಳಬೇಕು ಅಂತ ಆಸೆ ಕಣೋ ನನಗೆ, ಈ ಅಮ್ಮನ ಆಸೆನಾ ತೀರಿಸಲ್ಲವೇನೊ ನೀನು. ಅಕ್ಕಂದಿರ ಜೊತೆ ಇದ್ದು ನಿನಗೆ ಆ ಥರಾ ಆಸೆಗಳು ಬಂದಿರಬೇಕು, ಆ ಆಸೆಗಳನ್ನೆಲ್ಲ ಬಿಟ್ಟು ಬಿಡಪ್ಪ, ಒಳ್ಳೆ ಕಾಲೇಜಿಗೆ ಸೇರಿಸುತ್ತೇನೆ, ನೀನು ಚೆನ್ನಾಗಿ ಓದಿ ಡಾಕ್ಟರ್ ಆಗಬೇಕು ಕಣೋ, ನನ್ನಾಸೆ ತೀರಿಸುತ್ತೀಯಾ, ಮತ್ತಾವತ್ತೂ ಹೆಂಗಸಿನ ತರಹ ಬಟ್ಟೆ ಹಾಕಲ್ಲ ಅಂತ ನಂಗೆ ಮಾತು ಕೊಡೋ, ನಿನ್ನ ಕಾಲು ಹಿಡಿದುಕೊಳ್ಳುತ್ತೇನೆ ಕಣೊ' ಅಂತ ಅವನ ಕಾಲಿಡಿದು ಬೇಡಲು ಮುಂದಾದಳು. ಆಗ 'ಅಮ್ಮ, ಏನಮ್ಮ ಮಾಡ್ತಾ ಇದ್ದಿಯಾ ನೀನು, ಅಮ್ಮ ಕಣಮ್ಮ, ನೀನು ನನ್ನ ಕಾಲು ಹಿಡಿಯಬಾರದಮ್ಮ, ನಿನ್ನ ಮಾತಿನಂತೆ ಇರೋಕೆ ಪ್ರಯತ್ನ ಮಾಡ್ತೀನಿ, ನೀನು ಹೀಗೆಲ್ಲ ಹುಚ್ಚಿಯಂತೆ ಆಡಬೇಡ' ಅಂತ ತಾಯಿಯನ್ನು ತಡೆದ. ಮತ್ತೆ ಅಲ್ಲಿ ನಿಲ್ಲಲಾರದೆ ಅಳುವ ಅಮ್ಮನನ್ನು ನೋಡಲಾರದೆ ಹೊರಗೆ ಬಂದುಬಿಟ್ಟ. ತಾನು ಅಮ್ಮ ಹೇಳಿದಂತೆ ನಡೆದುಕೊಳ್ಳುವುದು ಅಸಾಧ್ಯವೆಂದು ತಿಳಿದಿತ್ತು. ತಾನು ಗಂಡು ರೂಪದ ಹೆಣ್ಣು ಅಂತ ಅವನಿಗೆ ತಿಳಿದಿತ್ತು. ಗಂಡಿನಂತೆ ಬದುಕುವುದಕ್ಕಿಂತ ಸಾವೇ ಮೇಲು ಎನಿಸಿತ್ತು.

ಪರೀಕ್ಷೆ ಮುಗಿಸಿ ಊರಿಗೆ ಬಂದ ವೀರು ನಿರ್ಧರಿಸಿಕೊಂಡೇ ಬಂದಿದ್ದ. ಮನೆಯಲ್ಲಿ ತಾನು ಏನೆಂದು ಹೇಳುವುದು, ಒಪ್ಪಿಕೊಂಡರೆ ತನ್ನಿಷ್ಟದಂತೆ ಇರುವುದು, ಒಪ್ಪಿಕೊಳ್ಳದಿದ್ದರೆ ಮನೆ ಬಿಟ್ಟು ಹೋಗುವುದು, ಹಾಗೆ ನಿರ್ಧಾರ ಮಾಡಿಕೊಂಡ ಮೇಲೆಯೇ ಅವನಿಗೆ ಸಮಾಧಾನವಾಗಿದ್ದು.

## ಕಳೆದ ಸಂಚಿಕೆಯಲ್ಲಿ



ಶಾಲೆಯ ನಾಟಕದಲ್ಲಿ ವೀರು ಸ್ತ್ರೀಪಾತ್ರ ಮಾಡುತ್ತಿರುವುದನ್ನು ನೋಡಿ ವಾರಿಜಾಳಿಗೆ ಅತೀವ ಸಂಕಟವಾಯಿತು. ಮಗನಿಗೆ ಹೆಣ್ಣು ಪಾತ್ರ ಕೊಟ್ಟ ಶಾಲೆಯವರ ಮೇಲೆ ಕೂಗಾಡಿ, ವೀರುವನ್ನು ಎಳೆದುಕೊಂಡು ಶಾಲೆಗೆ ಹೋದಳು. ಮಗ ಇಲ್ಲಿಯೇ ಇದ್ದರೆ ಬದಲಾಗುವುದಿಲ್ಲವೆಂದು ತಿಳಿದು, ವೀರುವನ್ನು ತನ್ನ ಅಣ್ಣನ ಮನೆಯಲ್ಲಿ ಬಿಡಲು ನಿರ್ಧರಿಸಿದಳು. ಅಣ್ಣನ ಮನೆಯಲ್ಲಿನ ಗಂಡುಮಕ್ಕಳ ಜೊತೆಯಲ್ಲಿ ಬೆಳೆಯುತ್ತಾ ಮಗ ತನ್ನ ಹೆಣ್ತನದ ಬಯಕೆಗಳನ್ನು ಮರೆಯುತ್ತಾನೆನ್ನುವ ಲೆಕ್ಕಾಚಾರದಲ್ಲಿ, ಮನೆಯವರ ವಿರೋಧದ ನಡುವೆಯೂ ವೀರುವನ್ನು ಅಣ್ಣನ ಮನೆಗೆ ತಂದುಬಿಟ್ಟಳು. ಹೆಂಡತಿಯ ನಡವಳಿಕೆಯಿಂದ ಅಸಮಾಧಾನಗೊಂಡರೂ ಮಾದುವಿಗೆ ಮುನಿಸಿಕೊಳ್ಳುವುದರ ಹೊರತು ಬೇರೆ ದಾರಿಯುಳಿದಿರಲಿಲ್ಲ. ವೀರುವನ್ನು ದೂರದಿಂದ ನೋಡಿ ಸಮಾಧಾನಪಟ್ಟುಕೊಳ್ಳತೊಡಗಿದ. ಇತ್ತ ಹೊಸ ವಾತಾವರಣದಲ್ಲಿ ಬೆಳೆಯತೊಡಗಿದರೂ ವೀರುವಿನೊಳಗಿನ ಬಯಕೆಗಳೇನೂ ಬದಲಾಗಲಿಲ್ಲ. ಅಣ್ಣಂದಿರೊಂದಿಗೆ ಕೋಣೆಯಲ್ಲಿದ್ದಾಗ, ಹುಡುಗಿಯಂತೆ ಬಟ್ಟೆ ತೊಡತೊಡಗಿದ.

ಸಮಯ ನೋಡಿ ತನ್ನ ನಿರ್ಧಾರವನ್ನು ತಿಳಿಸಲು ಕಾಯುತ್ತಿದ್ದ. ಎದೆಯೊಳಗೆ ಬೆಂಕಿ ಇಟ್ಟುಕೊಂಡೇ ದಿನ ತಳ್ಳುತ್ತಿದ್ದ ವೀರುವಿಗೆ ಅಕ್ಕಂದಿರ ಪ್ರೀತಿ, ದೊಡ್ಡಪ್ಪ, ದೊಡ್ಡಮ್ಮನ ಮಮತೆ ಸಂಜೀವಿನಿ ಆಗಿತ್ತು. ಅಪ್ಪ ಹೆಚ್ಚು ಮಾತಾಡುತ್ತಿರಲಿಲ್ಲ. ಅಮ್ಮನಿಗೆ ತನ್ನದೇ ಚಿಂತೆ, ತನ್ನದೇ ನೋವು, ಸಂಕಟದಲ್ಲಿ ಯಾರೊಂದಿಗೂ ಹೊರಗೆ ಹೇಳಿಕೊಳ್ಳಲಾರದೆ, ಒಳಗೆ ಇಟ್ಟುಕೊಳ್ಳಲಾರದೆ ದಿನೇ ದಿನೇ ಸೊರಗಿ ಹೋಗುತ್ತಿದ್ದಳು. ಅಮ್ಮನ ಸಂಕಟ ವೀರುವಿಗೆ ಅರ್ಥವಾಗುತ್ತಿದ್ದರೂ ಏನೂ ಮಾಡಲಾರದವನಾಗಿದ್ದ. ತಾನು ಕೊಡಲಿರುವ ಆಘಾತ ಅಮ್ಮ ಅಪ್ಪನ ಮೇಲೆ ಯಾವ ಪರಿಣಾಮ ಬೀರಬಹುದು ಅನ್ನೊ ಭಯ ಆತಂಕದಲ್ಲಿ ಅಮ್ಮನ ಮೊಗ ನೋಡಲಾರದೆ ಮನೆಗೆ ಹೋಗುವುದನ್ನೇ ಕಡಿಮೆ ಮಾಡಿಬಿಟ್ಟಿದ್ದ. ದೊಡ್ಡಪ್ಪನ ಮನೆ, ಬಿಟ್ಟರೆ ಮನೆಯ ಟೆರೇಸ್ ಮೇಲೆ ಇದ್ದು ಬಿಡುತ್ತಿದ್ದ. ಇವತ್ತು, ನಾಳೆ ಹೇಳಿ ಬಿಡೋಣ ಅಂತ ಅಂದುಕೊಂಡು ಮನೆಗೆ ಬರುತ್ತಿದ್ದವನು ಮುಂದಿನ ಪರಿಣಾಮ ಊಹಿಸಿ ಮುಂದಕ್ಕೆ ಹಾಕುತ್ತಿದ್ದ. ಹಾಗೆ ಮೀನಾ ಮೇಷ ಎಣಿಸುತ್ತಿರುವಾಗಲೇ ಭಾಸ್ಕರ ಹೆಂಡತಿ ಮಕ್ಕಳೊಂದಿಗೆ ಮನೆಗೆ ಬಂದಿಳಿದ. ಮಗ ತರುಣ್‌ಗೆ ವಿದೇಶದಲ್ಲಿ ಕೆಲಸ ಸಿಕ್ಕಿದ್ದು ಮದುವೆ ಮಾಡಿಯೇ ಕಳಿಸಬೇಕೆಂದು ನಿರ್ಧರಿಸಿದ್ದನ್ನು ತಂಗಿ ಮನೆಗೆ ಹೇಳಿ ಹೋಗೋಣ ಎಂದು ಬಂದಿದ್ದು. ಜಗದೀಶರ ಮೊದಲ ಮಗಳು ಎಂಜಿನಿಯರಿಂಗ್ ಮುಗಿಸಿದ್ದು ಅವಳಿಗೂ ಗಂಡು ಹುಡುಕುತ್ತಿರುವ ವಿಚಾರ ಅಣ್ಣನ ಕಿವಿಗೆ ಹಾಕಿದ್ದಳು.

ಮೇನಕ ಚಂದದ ಹುಡುಗಿ, ಒಳ್ಳೆಯ ಸಂಸ್ಕಾರವಿರುವ ಹುಡುಗಿ ಅಂತ ಗೊತ್ತಿದ್ದರಿಂದಲೇ ನೇರವಾಗಿ ಮಾತಾಡೋಣ, ತಂಗಿ ಮನೆಗೆ ಬಂದು ತುಂಬಾ ದಿನಗಳೇ ಆಗಿತ್ತು, ಮಕ್ಕಳಂತೂ ಕಾಲೇಜಿಗೆ ಹೋದ ಮೇಲೆ ಬಂದಿರಲೇ ಇಲ್ಲ. ಹಾಗಾಗಿ ಎಲ್ಲಾ ಉದ್ದೇಶಗಳನ್ನು ಒಟ್ಟುಗೂಡಿಸಿಕೊಂಡು ಸಂಸಾರದೊಂದಿಗೆ ಬಂದಿದ್ದ. ಕಿರಿ ಮಗ ವರುಣ್ ಕೂಡಾ ಎಂಜಿನಿಯರಿಂಗ್ ಮಾಡುತ್ತಿದ್ದು, ಅವನಿಗೆ ವಾರಿಜಳ ಹಿರಿಮಗಳನ್ನೇ ತಂದುಕೊಳ್ಳುವುದು ಅಂತ ಭಾಸ್ಕರ ಮತ್ತು ವಾರಿಜ ಹಿಂದೆಯೇ ನಿರ್ಧಾರ ಮಾಡಿಬಿಟ್ಟಿದ್ದರು. ಜಗದೀಶ, ಶಾಂಭವಿ, ಮೇನಕ ಒಪ್ಪಿದರೆ ಆದಷ್ಟು ಬೇಗ ಮದುವೆ ಮುಗಿಸಿಬಿಡುವುದು ಅಂತ ನಿರ್ಧರಿಸಿಕೊಂಡೇ ಭಾಸ್ಕರ– ಸುಧಾ ಬಂದಿದ್ದರು. ಅಣ್ಣ ಮತ್ತು ಅವನ ಸಂಸಾರ ಬಂದಿದ್ದು ವಾರಿಜಳಿಗೆ ಮತ್ತೆ ಸಂಭ್ರಮ ತಂದಿತ್ತು. ಹಳೆಯ ವಾರಿಜಳಾಗಿ ಸಡಗರದಿಂದ ಅಣ್ಣ ಅತ್ತಿಗೆ ಮತ್ತು ಅಳಿಯಂದಿರನ್ನು ನೋಡಿಕೊಳ್ಳುತ್ತಿದ್ದಳು. ತರುಣನನ್ನು ನೋಡಿ ಜಗದೀಶ ಮತ್ತು ಶಾಂಭವಿಗೆ ತಮ್ಮ ಮಗಳಿಗೆ ಆಗಬಹುದು ಅಂತ ಮಾತಾಡಿಕೊಂಡರು. ಭಾಸ್ಕರ ನೇರವಾಗಿಯೇ ನಿಮ್ಮ ಮಗಳನ್ನು ನಮ್ಮ ಮನೆಗೆ ಸೊಸೆ ಮಾಡಿಕೊಡಿ ಅಂತ ಕೇಳಿದ. ಮೇನಕಳನ್ನು ಕೂಡಾ ಏನಮ್ಮ ನಮ್ಮ ತರುಣ್ ನಿನಗೆ ಮದುವೆಯಾಗಲು ಒಪ್ಪಿಗೆಯೇ ಅಂತ ಕೇಳಿದಾಗ ಅಪ್ಪ ಅಮ್ಮ ಹೇಗೆ ಹೇಳಿದರೆ ಹಾಗೆ ಅಂತ ಹೇಳಿ ನಾಚಿ ಒಳಗೆ ಓಡಿದಾಗ ಎಲ್ಲರೂ ಜೋರಾಗಿ ನಕ್ಕು ಬಿಟ್ಟರು.

ನಿಮ್ಮ ಮನೆಗೆ ಸೊಸೆಯಾಗಲು ನಮ್ಮ ಮಗಳು ಪುಣ್ಯ ಮಾಡಿರಬೇಕು. ಆವತ್ತು ನಿಮ್ಮ ಮನೆಯ ಮಗಳನ್ನು ನಮ್ಮ ಮನೆಯ ಬೆಳಕಾಗಿ ಕಳಿಸಿದ್ದಿರಿ, ಇವತ್ತು ನಮ್ಮ ಮನೆಯ ಹೆಣ್ಣು ಮಗಳನ್ನು ತಂದುಕೊಳ್ಳಲು ಬಯಸಿದ್ದೀರಿ ಇದಕ್ಕಿಂತ ಬೇರೆ ಅದೃಷ್ಟವಿದೆಯೇ ಅಂತ ಹೇಳಿ ಸಂಪೂರ್ಣವಾಗಿ ಒಪ್ಪಿಗೆ ಕೊಟ್ಟು ಬಿಟ್ಟರು. ಸರಳವಾಗಿ ವಾರದಲ್ಲಿಯೇ ನಿಶ್ಚಿತಾರ್ಥ ಮುಗಿಸಿ ಇನ್ನೊಂದು ತಿಂಗಳಲ್ಲಿ ಮದುವೆ ಮುಹೂರ್ತ ಇಟ್ಟರು. ಮದುವೆ ಸಿದ್ಧತೆ ಮಾಡಿಕೊಳ್ಳಿ, ಮದುವೆಯೂ ಸರಳವಾಗಿಯೇ ನಡೆಯಲಿ, ಛತ್ರ ಇಷ್ಟು ಬೇಗ ಸಿಗುವುದಿಲ್ಲ, ಮನೆಯೇ ದೊಡ್ಡದಾಗಿದೆ, ಮನೆಯಲ್ಲಿಯೇ ಮದುವೆ ಮಾಡಿಕೊಡಿ, ಹಿಂದೆಲ್ಲ ಮನೆಯಲ್ಲಿಯೇ ಮದುವೆ ಮಾಡುತ್ತಿರಲಿಲ್ಲವೇ